# ಶ್ರೀಗುರುಜಗನ್ನಾಥದಾಸರು

*( ಕ್ರಿ. ಶ. 1837 – 1918 )*

ನಾಗರಾಜು ಹಾವೇರಿ ( ಹಲ್ಲವೀಕ್ರಿಯ ) – 99010 – 52578

*19ನೇ ಶತಮಾನದಲ್ಲಿ ಅವತರಿಸಿದ ಶ್ರೀಗುರುಜಗನ್ನಾಥದಾಸರು ತಮ್ಮ ಜೀವನ – ಕೃತಿಗಳಿಂದ ಹರಿದಾಸಸಾಹಿತ್ಯವನ್ನು ಮತ್ತಷ್ಟು ಶ್ರೀಮಂತಗೊಳಿಸಿ ವಿಜೃಂಭಿಸುವಂತೆ ಮಾಡಿದರು. ಹರಿದಾಸರಲ್ಲಿ ಬಂದ ಕೊನೆಯ ಅಪರೋಕ್ಷಜ್ಞಾನಿಗಳ ಶ್ರೀಗುರುಜಗನ್ನಾಥದಾಸರು. ಅವರ ಜೀವನ – ಸಾಧನೆ – ಕೃತಿಗಳ ಬಗ್ಗೆ ಸಂಕ್ಷಿಪ್ತವಾಗಿ ಅವರ ಅನುಗ್ರಹ ವಿಶೇಷದಿಂದ ತಿಳಿಸಲು ಪ್ರಯತ್ನಿಸುತ್ತೇನೆ.*

| | | |
|---|---|---|
| **ಹೆಸರು** | : | ಶ್ರೀ ಸ್ವಾಮಿರಾಯಾಚಾರ್ಯ |
| **ತಂದೆ** | : | ಶ್ರೀ ವೆಂಕಟಗಿರಿಯಾಚಾರ್ಯ |
| **ತಾಯಿ** | : | ಕುಂ ॥ ಸೌ ॥ ಸೀತಮ್ಮ |
| **ಜನ್ಮಸ್ಥಳ** | : | ಕೋಸಿಗಿ<br>ತಾ ॥ ಎಮ್ಮಿಗನೂರು ಜಿ ॥ ಕರ್ನೂಲು<br>ಆಂಧ್ರಪ್ರದೇಶ |
| **ಸ್ವರೂಪೋದ್ಧಾರಕ ಗುರುಗಳು** | : | ಶ್ರೀರಾಘವೇಂದ್ರಗುರುಸಾರ್ವಭೌಮರು |
| **ಅಂಕಿತ** | : | ಗುರುಜಗನ್ನಾಥವಿಠಲ |

ಶ್ರೀ ವೆಂಕಟಗಿರಿಯಾಚಾರ್ಯ ದಂಪತಿಗಳಿಗೆ ಜೀವನದಲ್ಲಿ ಎಲ್ಲಾ ಸೌಭಾಗ್ಯಗಳಿದ್ದರೂ ಪುತ್ರ ಸಂತಾನವಿರಲಿಲ್ಲ. ಭಾವುಕರು, ಗುರುಭಕ್ತರಾದ ಇವರು ಕೋಸಿಗಿಯಿಂದ ಮಂತ್ರಾಲಯಕ್ಕೆ ಬಂದು, ವಂಶೋದ್ಧಾರಕ ಪುತ್ರನನ್ನು ಅನುಗ್ರಹಿಸಬೇಕೆಂದು ಶ್ರೀಗುರುಸಾರ್ವಭೌಮರಲ್ಲಿ ಪ್ರಾರ್ಥಿಸಿ ಏಕಾಗ್ರಚಿತ್ತ ಮತ್ತು ಭಕ್ತಿ – ಶ್ರದ್ಧೆಗಳಿಂದ ಸೇವೆ ಮಾಡಿದರು. ಗುರುಗಳ ಸೇವೆ ವ್ಯರ್ಥವಾದೀತೇ? ವಿಶ್ವಾಸೋ ಫಲದಾಯಕ

ಎಂಬಂತೆ ಆ ಕಾಲದಲ್ಲಿ ಇಬರಾಮಪುರದ ಶ್ರೀ ಕೃಷ್ಣಾಚಾರ್ಯರೆಂಬ ಮಹಾನ್ ಸಾಧಕರೊಬ್ಬರಿದ್ದರು. ಅವರನ್ನು "ಅಪ್ಪಾ" ಅವರೇ ಎಂದು ಜನರು ಭಕ್ತಿಯಿಂದ ಸಂಬೋಧಿಸುತ್ತಿದ್ದರು. ಸಜ್ಜನರ ಉದ್ಧಾರಕ್ಕಾಗಿಯೇ ಅವತರಿಸಿದ ಅಪೂರ್ವ ರತ್ನ. ಇವರು ಶ್ರೀರಾಘವೇಂದ್ರಗುರುಸಾರ್ವಭೌಮರ ಅವಿಚ್ಛಿನ ಭಕ್ತರು.

ಶ್ರೀ ಅಪ್ಪಾರವರು ಹಾಗೂ ಶ್ರೀ ವೆಂಕಟಗಿರಿಯಾಚಾರ್ಯರು ಬಾಲ್ಯದಿಂದಲೇ ಆತ್ಮೀಯ ಸ್ನೇಹಿತರಾಗಿದ್ದರು. ಶ್ರೀ ಅಪ್ಪಾರವರು ಯಾವ ಮುನ್ಸೂಚನೆಯೂ ಇಲ್ಲದಲೇ ಕೋಸಿಗಿಗೆ ಬಂದರು. ಆಧ್ಯಾತ್ಮ – ತತ್ವಜ್ಞಾನಗಳ ವಿಷಯವೇ ಇವರ ಹರಟೆ ಯಾಗಿತ್ತು. ಆ ಸಂದರ್ಭದಲ್ಲಿ ಶ್ರೀ ವೆಂಕಟಗಿರಿಯಾಚಾರ್ಯರು ತಮ್ಮ ಅಂತರಂಗದ ಅಳಲನ್ನು ಶ್ರೀ ಅಪ್ಪಾರವರ ಬಳಿ ತೋಡಿಕೊಂಡರು ಹಾಗೂ ತಮಗೆ ಸತ್ಪುತ್ರ ಸಂತಾನವಾಗುವಂತೆ ಅನುಗ್ರಹಿಸಲು ಕೇಳಿಕೊಂಡರು. ಶ್ರೀ ಅಪ್ಪಾರವರು ಪಂಚಮುಖಪ್ರಾಣದೇವರ ಉಪಾಸಕರಾಗಿದ್ದರು. ಶ್ರೀ ಅಪ್ಪಾರವರು " ನಾನೇನು ಶಾಪಾನುಗ್ರಹ ಶಕ್ತನಲ್ಲ. ಶ್ರೀ ರಾಘವೇಂದ್ರಗುರುಸಾರ್ವಭೌಮರು ನಿನಗೆ ಅನುಗ್ರಹಿಸುವರು. ನೀನು ಶ್ರೀ ಗುರುಸಾರ್ವಭೌಮರಲ್ಲಿ ಮಾಡಿದ ಸೇವೆ ಎಂದಿಗೂ ವ್ಯರ್ಥವಾಗುವುದಿಲ್ಲ. ನೀನು ನಾಳೆ ನಮ್ಮ ಪೂಜಾ ಸಮಯದಲ್ಲಿ ಉಪಸ್ಥಿತನಿರು ಎಂದು ಹೇಳಿದರು. ಆ ದಿನ ಶ್ರೀ ಪಂಚಮುಖಪ್ರಾಣದೇವರನ್ನು ವಿಶೇಷವಾಗಿ ಪೂಜಿಸಿ ಭಕ್ತಿಪೂರ್ವಕ ಪ್ರಾರ್ಥಿಸುತ್ತಾ ತಮ್ಮ ಮಿತ್ರನಿಗೆ ಪುತ್ರ ಸಂತಾನವನ್ನು ಅನುಗ್ರಹಿಸು " ಎಂದು ಬೇಡುತ್ತಾ ದೇವರ ಪೆಟ್ಟಿಗೆಗೆ ಕೈ ಹಾಕಿದರು.

ಆ ಪೆಟ್ಟಿಗೆಯಲ್ಲಿ ಒಂದು ಮುತ್ತು ಅವರ ಕೈಗೆ ಸಿಕ್ಕಿತು. ಆ ಮುತ್ತನ್ನು ಶ್ರೀ ವೆಂಕಟಗಿರಿಯಾಚಾರ್ಯರಿಗೆ ಕೊಡುತ್ತಾ " ಆಚಾರ್ಯ ಚಿಂತಿಸಬೇಡಿ. ಶ್ರೀಹರಿವಾಯುಗುರುಗಳು ನಿಮಗೆ ಮುತ್ತಿನಂಥಾ ಪುತನನ್ನು ಕರುಣಿಸುವಾ " ಎಂದರು. ಭಗವದ್ಭಕ್ತರ ಮಾತುಗಳೆಲ್ಲವೂ " ವಾಚಮರ್ಥೋನುಧಾವತಿ " ಅಲ್ಲವೇ? ಅಂತೂ ಆ ದಂಪತಿಗಳ ಆಸೆ ಫಲಿಸಿತು. ಮುಂದೆ ಆ ದಂಪತಿಗಳಿಗೆ ಮಹಾಭಕ್ತನಾಗಿ ಕೋಸಿಗಿಯ ಕಣ್ಮಣಿಯಾಗಲಿರುವ ಮುತ್ತಿನಂಥಾ ಪುತ್ರ ಸಂತಾನವಾಯಿತು. ಶ್ರೀ ವೆಂಕಟಗಿರಿಯಾಚಾರ್ಯರು ಆ ಮಗುವಿಗೆ " ಸ್ವಾಮಿರಾಯ " ಎಂದು ನಾಮಕರಣ ಮಾಡಿದರು. ಮುದ್ದಾದ ಮಗುವಿನ ಆಟ – ಪಾಟಗಳನ್ನು ಕಂಡು ಹಿರಿ ಹಿರಿ ಹಿಗ್ಗಿದರು.

ಶ್ರೀ ವೆಂಕಟಗಿರಿಯಾಚಾರ್ಯರು ತಮ್ಮ ಪುತ್ರನಿಗೆ ಸಕಾಲಕ್ಕೆ ಚೌಲ, ಉಪನಯನಾದಿಗಳನ್ನು ಮಾಡಿದರು. ಮೊದಲೇ ಸ್ಫುರದ್ರೂಪಿಯಾದ ಸ್ವಾಮಿರಾಯನು

ಸಂಸ್ಕಾರದ ನಂತರ ಮತ್ತಷ್ಟು ಆಕರ್ಷಕನಾಗಿದ್ದನು. ಸ್ವತಃ ಪಂಡಿತರಾದ ಅವನ ತಂದೆಯೇ ಅವನ ವಿದ್ಯಾಭ್ಯಾಸದ ಉಸ್ತುವಾರಿಯನ್ನು ವಹಿಸಿದರು. ಆದರೆ ಸ್ವಾಮಿರಾಯನು ವಿದ್ಯಾಭ್ಯಾಸದ ಕಡೆಗೆ ಮನಸ್ಸು ಕೊಡದೇ ಯಾವಾಗಲೂ ತನ್ನ ವಯಸ್ಸಿನ ಹುಡುಗರೊಂದಿಗೆ ಆಟ – ನೋಟಗಳಲ್ಲಿ ಮಗ್ನನಾದ ಸ್ವಾಮಿರಾಯ ಹಠಮಾರಿಯೂ ಆಗಿದ್ದನ್ನು, ಅವನ ತಂದೆಗೆ ವ್ಯಥೆಯಾದರೂ ಹೇಳಲಾರದ ನಿಸ್ಸಹಾಯಕರಾಗಿದ್ದರು. ಇದಕ್ಕೆ ಕಾರಣವೂ ವುಂಟು. ಸ್ವಾಮಿರಾಯನು ಚಿಕ್ಕವನಿದ್ದಾಗಲೇ ಅವನ ತಾಯಿ ತೀರಿಕೊಂಡಿದ್ದರಿಂದ ಅವನ ಅಜ್ಜಿ ಮತ್ತು ತಂದೆಯವರನ್ನು ತುಂಬಾ ಮುದ್ದಾಗಿ ಬೆಳೆಸಿದರು.

ಮದುವೆಯಾದರೆ ಮಗ ಹಾದಿಗೆ ಬರಬಹುದೆಂದು ವಿಚಾರಿಸಿದ ಶ್ರೀ ವೆಂಕಟಗಿರಿಯಾಚಾರ್ಯರು ಮಗನಿಗೆ ಮದುವೆಯನ್ನೂ ಮಾಡಿದರು. ಆ ಹುಡುಗಿಯೂ ಮದುವೆಯಾದ 2 ವರ್ಷದಲ್ಲಿ ಇಲ್ಲವಾದಳು. ನಂತರ ಸ್ವಾಮಿರಾಯನಿಗೆ ಎರಡನೇ ಮದುವೆಯನ್ನು ಮಾಡಿದರು.

ಆದರೆ ಮೊದಲನೇಯ ಪತ್ನಿಯ ಸಾವಿನಿಂದಾಗಲೀ ಅಥವಾ ಎರಡನೇ ಪತ್ನಿಯ ಪ್ರವೇಶದಿಂದಾಗಲೀ ಸ್ವಾಮಿರಾಯನ ಜೀವನದಲ್ಲಿ ಯಾವ ವಿಧವಾದ ಬದಲಾವಣೆಯೂ ಆಗಲಿಲ್ಲ. ಉಂಡಾಡಿ ಭಟ್ಟನಂತೆ ಊಟ – ಆಟಗಳಿಗೇ ಅವನ ಜೀವನ ಮೀಸಲಾಗಿತ್ತು. ಯಾವ ಕೆಲಸಕ್ಕೂ ಬಾರದ ಹುಡಗನೆಂದು ಮನೆಯವರು, ಊರಿನವರು ಅಂದುಕೊಳ್ಳುವಂತಾಯಿತು. ಶ್ರೀ ವೆಂಕಟಗಿರಿಯಾಚಾರ್ಯರು ಬಹಳ ಚಿಂತಾಕ್ರಾಂತರಾದರು. ಶ್ರೀಹರಿವಾಯುಗುರುಗಳ ಅನುಗ್ರಹದಿಂದ ಜನಿಸಿದ ಪುತ್ರ ಈ ಸ್ಥಿತಿಗೆ ಹೇಗೆ ಬಂದನೆಂಬುದು ಅವರಿಗೆ ಬಿಡಸಲಾಗದ ಒಗಟಾಗಿತ್ತು.

ಜೀವನದಲ್ಲಿ ಮಹತ್ವದ ತಿರುವು ಉಂಟಾಗಬೇಕಾದರೇ ಆ ಯೋಗ ಬರಬೇಕು. ಕಾಲನಾಮಕ ಪರಮಾತ್ಮನ ಕೃಪೆ ಬೇಕು. ಜೀವನ ಪ್ರಾರಬ್ಧಕರ್ಮಗಳು ತೀರಬೇಕು. ಶ್ರೀ ಪುರಂದರದಾಸರು – ಶ್ರೀ ಕನಕದಾಸರು – ಶ್ರೀ ಪ್ರಸನ್ನವೆಂಕಟದಾಸರು – ಶ್ರೀ ವಿಜಯದಾಸರು – ಶ್ರೀ ಗೋಪಾಲದಾಸರು – ಶ್ರೀ ಜಗನ್ನಾಥದಾಸರು ಮೊದಲಾದವರ ಜೀವನದಲ್ಲೂ ಇಂತಹ ಮಹತ್ವದ ತಿರುವನ್ನು ಕಾಣುತ್ತೇವೆ. ಮುಂದೆ ಗುರುಜಗನ್ನಾಥದಾಸನಾಗಲಿರುವ ಸ್ವಾಮಿರಾಯನೂ ಇದಕ್ಕೆ ಹೊರತಲ್ಲ.

ಸುಮಾರು 30 ವರ್ಷದ ಆಸುಪಾಸಿನಲ್ಲಿದ್ದ ಸ್ವಾಮಿರಾಯನನ್ನು ಆ ಊರಿನ ಹಿರಿಯರೊಬ್ಬರು ಹೀಗೆ ಆಕ್ಷೇಪಿಸಿದರು " ನಿನ್ನ ತಂದೆಯಾದರೋ ದೊಡ್ಡ ವಿದ್ವಾಂಸರು – ಸದಾಚಾರ ಸಂಪನ್ನರು. ಅವರ ಹೆಸರಿಗೆ ಕಳಂಕ ತರುವ ಮಗ ನೀನಾಗಿರುವೆ. ನಿನ್ನ ತಂದೆಗೆ ನೀನೊಂದು ಭಾರ " ಹೀಗೆ ಅರ್ಥ ಬರುವಂತೆ ಮಾತನಾಡಿದರು. ಆ ಹಿರಿಯರ ಮಾತು ಸ್ವಾಮಿರಾಯನ ಮನಸ್ಸಿಗೆ ನಾಟುವಂತಾಯಿತು. ರೋಮಾಂಚನ ಹಾಗೂ ಅವನ ಚಿತ್ತವೆಲ್ಲವೂ ಜರ್ಝರಿತವಾಯಿತು. ಯಾವುದೋ ಅವ್ಯಕ್ತ ಶಕ್ತಿಯಿಂದ ಅವನ ಮನಸ್ಸನು ಕುಟುಕಿದಂತಾಯಿತು. ಇದೆಲ್ಲವೂ ಶ್ರೀ ಹರಿಯ ಸಂಕಲ್ಪ.

ಸ್ವಾಮಿರಾಯನ ಸ್ಮೃತಿಪಟಲದಲ್ಲಿ ಅವನು ಕಳೆದ ಬಾಲ್ಯಾವಸ್ಥೆಯ ನೆನಪುಗಳ ಸುರಳಿ ಬಿಚ್ಚತೊಡಗಿತು. ಸ್ವಾಮಿರಾಯನ ಮನಸ್ಸು ಒಂದು ಹಂತಕ್ಕೆ ಬಂತು. ತಾನು ಇಷ್ಟುದಿನ ಮಾಡಿದ್ದು ತಪ್ಪು ಎನಿಸಿತು. ಬಹಳ ಪಶ್ಚಾತ್ತಾಪವಾಯಿತು. ಪಶ್ಚಾತ್ತಾಪ ಪಟ್ಟಷ್ಟೂ ಮಾನಸಿಕ ಭಾವನೆಗಳು ಶುದ್ಧಿ ಎನಿಸ ತೊಡಗಿದವು. ಕಣ್ಣುಬಿಟ್ಟಷ್ಟೂ ಅವನ ದೃಷ್ಠಿಗೆ ಸತ್ಯವೊಂದು ಗೋಚರಿಸಿ, ಮನಸ್ಸು ಒಂದು ನಿರ್ಧಾರಕ್ಕೆ ಬಂದಂತಾಯಿತು. ಆಧ್ಯಾತ್ಮಿಕ ಸಿದ್ಧಿ – ಸಾಧನೆಗಳ ಪಥ ಅವನ ಮುಂದೆ ಸುಳಿದಂತಾಯಿತು. ಯಾರಿಗೂ ಹೇಳದೇ ಕೋಸಿಗಿಯನ್ನು ಬಿಟ್ಟು, ಬುಡಮಲದೊಡ್ಡಿ ಎಂಬ ಪ್ರಶಾಂತಸ್ಥಳ, ಶ್ರೀಪ್ರಾಣದೇವರ ಸನ್ನಿಧಾನದಿಂದ ಪವಿತ್ರ ತಾಣ ಮತ್ತು ಆಧ್ಯಾತ್ಮ ಸಾಧನೆಗೆ ಹೇಳಿ ಮಾಡಿಸಿದಂತಾ ಪವಿತ್ರ ಸ್ಥಳ. ಸ್ವಾಮಿರಾಯನು ಆ ಚಿಕ್ಕ ಗ್ರಾಮಕ್ಕೆ ಬಂದು ಶ್ರೀ ಪ್ರಾಣದೇವರ ಮುಂದೆ ತನ್ನ ಕಠಿಣ ಸೇವೆಯನ್ನು ಪ್ರಾರಂಬಿಸಿದನು.

ಶ್ರೀಪ್ರಾಣದೇವರನ್ನು ಆರ್ತನಾಗಿ ಪರಿಪರಿಯಿಂದ ಬೇಡಿಕೊಂಡನು. ಪಶ್ಚಾತ್ತಾಪದಿಂದ ಅವನ ಮನಸ್ಸು ಶುದ್ಧವಾಗಿತ್ತು. ಸ್ವಾಮಿರಾಯನ ಸೇವೆಯನ್ನು ಶ್ರೀಪ್ರಾಣದೇವರು ಮನಃಪೂರ್ವಕವಾಗಿ ಸ್ವೀಕರಿಸಿದರು. ಅವನ ಮೇಲೆ ಶ್ರೀಪ್ರಾಣದೇವರು ಅಭಯಹಸ್ತವನ್ನಿಟ್ಟು, ನಾಲಿಗೆಯ ಮೇಲೆ ಬೀಜಾಕ್ಷರಗಳನ್ನು ಬರೆದರು. ಅದರೊಂದಿಗೆ ಮಂತ್ರಾಲಯದ ಪ್ರಭುಗಳೇ ನಿನಗೆ ಪಾಠ ಹೇಳುವರೆಂದು ಸೂಚಿಸಿದರು. ಶ್ರೀಹರಿವಾಯುಗಳ ಅನುಗ್ರಹವಾದ ಮೇಲೆ ಗುರುಗಳ ಅನುಗ್ರಹ ಆಗುವದು ತಡವೇ?

ಸ್ವಾಮಿರಾಯನ ಜೀವನದಲ್ಲಿ ಇನ್ನೊಂದು ಅವಿಸ್ಮರಣೀಯದಿನ. ಸ್ವಾಮಿರಾಯನಿಗೆ ಸ್ವಪ್ನವಾಗಿದೆ. ಸ್ವಪ್ನದಲ್ಲಿ ಸ್ವಾಮಿರಾಯನು ಕಂಡಿದ್ದಾದರೂ ಏನು? ಸ್ವಾಮಿರಾಯನ ಮನೆತನದ ಗುರುಗಳ, ಅಪರೋಕ್ಷಜ್ಞಾನಿಗಳಾದ ಇಬರಾಮಪುರದ ಅಪ್ಪಾ ಅವರು ಮುಂದೆ ಬರುತ್ತಾ ಇದ್ದಾರೆ. ಸ್ವಾಮಿರಾಯ ನೋಡು ಯಾರು ಬರುತ್ತಿದ್ದಾರೆ. ಕಲಿಯುಗದ ಕಾಮಧೇನು – ಕಲ್ಪವೃಕ್ಷವಾದ ಶ್ರೀರಾಘವೇಂದ್ರಗುರುಸಾರ್ವಭೌಮರನ್ನು ಕರೆದು ತಂದಿರುವೆ. ಇಂದಿನಿಂದ ಜೀವನದಲ್ಲಿ ಹೊಸ ಅಧ್ಯಾಯ ಪ್ರಾರಂಭವಾಯಿತು. ಈ ಮಧ್ವವಾರಿಧಿಚಂದ್ರಮರು ನಿನಗೆ ವೇದಾಂತ ಪಾಠಗಳನ್ನು ಹೇಳಿಕೊಡುವರು ಎಂಬ ಮಾತುಗಳು ಸ್ವಾಮಿರಾಯನ ಕಿವಿಯ ಮೇಲೆ ಬಿದ್ದಂತಾಯಿತು.

ಸ್ವಪ್ನದಲ್ಲಿ ಸ್ವಾಮಿರಾಯನು ಒಂದು ಮಹಾನ್ ಬೆಳಕಿನ ಬೆಟ್ಟವೇ ಅಪ್ಪಾ ಅವರ ಹಿಂದೆ ಬರುತ್ತಿರುವುದನ್ನು ಕಂಡನು. ಆ ದಿವ್ಯಪ್ರಭೆಯ ಮಧ್ಯದಲ್ಲಿ ಮಂದಸ್ಮಿತ ಮುಖಾರವಿಂದದ ಮಂತ್ರಾಲಯದ ಮುನಿಪುಂಗವರನ್ನು ಕಂಡನು. ಒಂದು ಕ್ಷಣ ರೋಮಾಂಚನವಾಯಿತು. " **ಓಂ ಅಥಾತೋಬ್ರಹ್ಮಜಿಜ್ಞಾಸ ಓಂ** " ಎಂದು ಪಾಠ ಪ್ರಾರಂಭವಾಯಿತು. ಶ್ರೀ ಪರಿಮಳಾಚಾರ್ಯರ ಪಾಠ – ಅಂದ ಮೇಲೆ ಅವರ ಸಾಕ್ಷತ್ ದರ್ಶನ ಪಡೆದವನೇ ಧನ್ಯ – ಮಾನ್ಯ. **ಶ್ರೀ ಕೃಷ್ಣನು ಅರ್ಜುನನಿಗೆ ಭಗವದ್ಗೀತಾ ಬೋಧಿಸಿದಂತೆ, ಶ್ರೀ ವೇದವ್ಯಾಸರು ಆಚಾರ್ಯ ಮಧ್ವರಿಗೆ ತತ್ವಜ್ಞಾನ ನೀಡಿದಂತೆ, ಶ್ರೀರಾಘವೇಂದ್ರಗುರುಸಾರ್ವಭೌಮರು ಸ್ವಾಮಿರಾಯನಿಗೆ ವೇದಾಂತ ಪಾಠ ಹೇಳಿದರು. ಅವರಿಗೆ ಅರಿವಿಲ್ಲದಂತೆ ಶ್ರೀಮದಾಚಾರ್ಯರ ತತ್ವಜ್ಞಾನ ಸ್ವಾಮಿರಾಯನ ತಲೆಯಲ್ಲಿ ತುಂಬಿತು. ಮನಸ್ಸಿನಲ್ಲಿ ಹೊಳಯಿತು.**

ಸ್ವಾಮಿರಾಯನ ದಿನಚರಿ ಪೂರ್ಣ ಬದಲಾಯಿತು. ಧರ್ಮಾಚರಣೆ – ಶುದ್ಧ ಕರ್ಮಾಚರಣೆ ಮತ್ತು ಹೆಚ್ಚಿನ ಸಮಯವನ್ನು ವೇದಾಂತದ ಚಿಂತನೆಯಲ್ಲೇ ಕಾಲ ಕಳೆಯುತ್ತಿದ್ದನು. ಸದಾ ಆಧ್ಯಾತ್ಮಿಕ ಚಿಂತನೆಯಲ್ಲೇ ಇರುವ ಶ್ರೀ ಸ್ವಾಮಿರಾಯಾಚಾರ್ಯರಿಗೆ ಶ್ರೀಮದ್ಭಾಗವತ ಪುರಾಣವನ್ನು ಹೇಳಲು ತವಕ ಉಂಟಾಯಿತು. ಹಿರಿಯರ ಅನುಮತಿ ಪಡೆದು ಹೇಳುವುದು ಸೂಕ್ತವೆಂದು ತಮ್ಮ ತಂದೆಯವರಿಗೆ ನಮಸ್ಕರಿಸಿ ತಮ್ಮ ಇಚ್ಛೆಯನ್ನು ನಿವೇದಿಸಿಕೊಂಡರು. " **ವಿದ್ಯಾವತಾಂ ಭಾಗವತೇ ಪರೀಕಾ** " ಎಂಬುದು ಪಂಡಿತ ಮಂಡಲಿಯಲ್ಲಿ ಜನಜನಿತವಾದ ಮಾತು. ಪ್ರಾರಂಭವಾಯಿತು ಆಚಾರ್ಯರ ಅಮೋಘ ಪುರಾಣ

ಕಥನ. ಶ್ರೀಮದ್ಭಾಗವತದ ಮಂಗಳಾಚರಣೆ ಶ್ಲೋಕವನ್ನು ತೆಗೆದುಕೊಂಡು ಆ ಶ್ಲೋಕದಲ್ಲಿ ಅಡಗಿದ ಶ್ರೀವೇದವ್ಯಾಸರ ಮನದಾಸೆಯನ್ನು ಎಳೆ – ಎಳೆಯಾಗಿ ಬಿಡಿಸಿ ವ್ಯಾಖ್ಯಾನಿಸಿದರು. ಆಲಿಸಿದ ಶ್ರೋತೃಗಳು ಆಚಾರ್ಯರ ಅದ್ಭುತ ಪಾಂಡಿತ್ಯವನ್ನು – ವಾಗ್ಝರಿಯನ್ನು ಕೇಳಿ, ನೋಡಿ ಆಶ್ಚರ್ಯಪಟ್ಟರು. ***ಕಿಮಲಭ್ಯಂ ಭಗವತೀ ಪಸನ್ನೇ ಶ್ರೀನಿಕೇತನೆ?*** ಭಗವಂತನ ಪ್ರಸಾದವಾದರೇ ಯಾವುದು ತಾನೇ ಅಸಾಧ್ಯ?

ಶ್ರೀರಾಘವೇಂದ್ರಗುರುಸಾರ್ವಭೌಮರ ಕರುಣಾನುಗ್ರಹವನ್ನು ಪಡೆದ ಶ್ರೀಸ್ವಾಮಿರಾಯಾಚಾರ್ಯರಿಗೆ ಶ್ರೀಗುರುಸಾರ್ವಭೌಮರಲ್ಲಿ ಭಕ್ತಿ – ಶ್ರದ್ಧೆಗಳು ಇಮ್ಮಡಿಗೊಂಡವು. ತಮ್ಮ ಜೀವನದಲ್ಲಿ ಅದ್ಭುತ ಪವಾಡವನ್ನು ಮಾಡಿ ಮೂಕನನ್ನು ಮುಕುಂದಶಯನನನ್ನಾಗಿ ಮಾಡುವ, ಶುಂಠನನ್ನು ಪಂಡಿತನನ್ನಾಗಿಸುವ ಮಾಡುವ ಶ್ರೀಗುರುರಾಜರ ಅದ್ಭುತ ಸಾಮರ್ಥ್ಯವನ್ನು ಸ್ವತಃ ಅನುಭವಿಸಿದ ಅವರು ಶ್ರೀಗುರುರಾಜರ ವಿಶೇಷ ಸೇವೆಯನ್ನು ಮಾಡಲು ತಮ್ಮ ಶೇಷಾಯುಷ್ಯವನ್ನು ಶ್ರೀಗುರುಸಾರ್ವಭೌಮರ ಸೇವೆಗೆ ಮುಡುಪಾಗಿಟ್ಟರು. ಶ್ರೀ ಗುರುರಾಜರ ಸೇವಾಕಾಂಕ್ಷಿಗಳಾಗಿ ಮಂತ್ರಾಲಯಕ್ಕೆ ಬಂದು ಶ್ರೀ ಗುರುರಾಜರ ಬೃಂದಾವನದ ಮುಂದೆ ನಿಂತು " **ನೋಡಿದ್ಯಾ ಗುರುರಾಯರ ನೋಡಿದ್ಯಾ – ನೋಡಿದೆ ಗುರುರಾಯರನ್ನ ಈ ರೂಢಿಯೊಳಗೆ ಮೆರೆವೋ ಸಾರ್ವಭೌಮನ್ನ** " ಎಂದು ಹಾಡಿ ಕೊಂಡಾಡಿದರು. ಮುಂದೆ ಶ್ರೀ ಕೃಷ್ಣದಾಸರಿಂದ ***"ಗುರುಜಗನ್ನಾಥವಿಠಲ"*** ಎಂಬ ಅಂಕಿತವನ್ನು ಪಡೆದು ಅನೇಕ ಪದ–ಪದ್ಯ–ಉಗಾಭೋಗ–ಷಟ್ಪದಿಗಳನ್ನು ಕನ್ನಡ – ಸಂಸ್ಕೃತ ಭಾಷೆಯಲ್ಲಿ ರಚಿಸಿ ಹರಿದಾಸಸಾಹಿತ್ಯವನ್ನು ಬೆಳಗಿಸಿದ ದಾಸಾರ್ಯರು ಆಶ್ವಯುಜ ಬಹುಳ ಪ್ರತಿಪದದಂದು ಕವಿತಾಳದಲ್ಲಿ ತಮ್ಮ ಅವತಾರ ಕಾರ್ಯ ಮುಗಿಸಿ ಶ್ರೀಹರಿಪದ ಸೇರಿದರು.